## ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಸಕಲೇಶಪುರ

## C .C.No. 11/2022

| | | |
|---|---|---|
| **ಹೆಸರುಃ** | **ಶ್ರೀ ನಿಧಿ ಎಂ ಸಿ** | **DW-1** |
| **ತಂದೆ/ಗಂಡ ಹೆಸರುಃ** | **ಎಂ ಎಸ್ ಚನ್ನೆಗೌಡ** | |
| **ವಯಸ್ಸುಃ** | **56 ವರ್ಷ** | |
| **ವೃತ್ತಿಃ** | **ವ್ಯಾಪಾರ** | |
| **ವಿಳಾಸಃ** | **ಮಾಗೇರಿ ಗ್ರಾಮ** | **ದಿನಾಂಕಃ07.08.2026** |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಆರೋಪಿ ಪರ ಶ್ರೀ ಎಸ್ ಪಿ ವಕೀಲರಿಂದ**

ನಾನು ಶ್ರೀನಿಧಿ ಎಂಟರ್ ಪ್ರೈಸಸ್ ಎಂಬ ಹಾರ್ಡ್ ವೇರ್ ಅಂಗಡಿಯನ್ನು ಇಟ್ಟುಕೊಂಡಿರುತ್ತೇನೆ. ದೂರುದಾರರು ನನ್ನ ವಿರುದ್ದ ಸುಳ್ಳು ಕೇಸನ್ನು ದಾಖಲು ಮಾಡಿರುತ್ತಾರೆ. ನಾನು ದೂರುದಾರರಿಂದ ಯಾವುದೇ ಹಣ ಪಡೆದುಕೊಂಡಿರುವುದಿಲ್ಲ. ನಾನು ದೂರುದಾರರರಿಗೆ ಯಾವುದೇ ಚೆಕ್ ನ್ನು ನೀಡಿರುವುದಿಲ್ಲ. ನಾನು 10 ವರ್ಷಗಳ ಹಿಂದೆ ನನ್ನ ಚಿಕ್ಕಪ್ಪ ಕೃಷ್ಣೇಗೌಡರಿಂದ 2 ಲಕ್ಷ ಸಾಲ ಪಡೆದುಕೊಂಡು, ಅವರಿಗೆ ಖಾಲಿ ಚೆಕ್ ನ್ನು ನೀಡಿದ್ದೆ. ಆನಂತರ ಕೃಷ್ಣೇಗೌಡರಿಗೆ ಹಣವನ್ನು ವಾಪಸ್ಸು ನೀಡಿ ಚೆಕ್ ನೀಡಿ ಎಂದು ಕೇಳಿದಾಗ ಅವರು ಚೆಕ್ ನ್ನು ಆನಂತರ ನೀಡುತ್ತೇನೆಂದು ತಿಳಿಸಿದರು. 4 ವರ್ಷಗಳ ನಂತರ ದೂರುದಾರರು ನ್ಯಾಯಾಲಯದಿಂದ ನನಗೆ ನೋಟೀಸ ಕಳುಹಿಸಿರುತ್ತಾರೆ. ನಾನು ಅವರಿಗೆ ಮರುತ್ತರ ಸಹ ನೀಡಿರುತ್ತೇನೆ.

ನಾನು ದೂರುದಾರರಿಗೆ ಯಾವುದೇ ಹಣ ಕೊಡುವ ಭಾಧ್ಯತೆ ಇರುವುದಿಲ್ಲ. ದೂರುದಾರರು ನನ್ನ ಚಿಕ್ಕಪ್ಪ ಕೃಷ್ಣೇಗೌಡರ ವಿರುದ್ದ ಸಿ ಸಿ 92/2025 ರಲ್ಲಿ 20 ಲಕ್ಷದ ಸಲುವಾಗಿ ಚೆಕ್ ಪ್ರಕರಣ ದಾಖಲು ಮಾಡಿರುತ್ತಾರೆ. ದೂರುದಾರರು ಮತ್ತು ಕೃಷ್ಣೆಗೌಡರು ಸುಮಾರು 10 ವರ್ಷಗಳಿಂದ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದರು. ನಾನು ಯಾರಿಂದಲೂ ಸಾಲ ಪಡೆದಿರುವುದಿಲ್ಲ. ನಾನು ದೂರುದಾರರಿಂದ ಯಾವುದೇ ಹಣ ಪಡೆದಿರುವುದಿಲ್ಲ ಮತ್ತು ಯಾವುದೇ ಚೆಕ್ ನೀಡಿರುವುದಿಲ್ಲ. ನನ್ನ ವಿರುದ್ದ 20 ಲಕ್ಷದ ಸುಳ್ಳು ಕೇಸನ್ನು ದಾಖಲು ಮಾಡಿರುತ್ತಾರೆ.

ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಪ್ರಧಾನ **ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**